



## ಮೂಢ ನಂಬಿಕೆ!

ಗರ್ಭಿಣಿಯರು ದಿನನಿತ್ಯ ಹಾಲಿಗೆ ಕೇಸರಿ ಬೆರೆಸಿ ಕುಡಿದರೆ, ಹುಟ್ಟುವ ಮಗು ಶ್ವೇತವರ್ಣವಾಗಿರುತ್ತದೆ ಎನ್ನುವ ಮೂಢನಂಬಿಕೆ ನಮ್ಮಲ್ಲಿ ಈಗಲೂ ಇದೆ! ಹುಟ್ಟುವ ಮಗುವಿನ ಕೂದಲು, ಚರ್ಮ, ಕಣ್ಣಿನ ಬಣ್ಣಗಳೆಲ್ಲಾ ಕೇವಲ ಅನುವಂಶೀಯ. ಅದನ್ನು ನಿಯಂತ್ರಿಸುವ ಅಧಿಕಾರ ನಮ್ಮಲ್ಲಿರುವ ವಂಶವಾಹಿಗಳದ್ದೇ ಹೊರತು ಕೇಸರಿಯದ್ದಲ್ಲ! ಇದನ್ನು ಎಷ್ಟು ಹೇಳಿದರೂ ಜನಸಾಮಾನ್ಯರ ತಲೆಗೆ ಹೊಕ್ಕುವುದಿಲ್ಲ. ಕಡೆಗೆ ವಿಜ್ಞಾನಕ್ಕಿಂತ ಸಂಸ್ಕೃತಿಯ ಬೇರು ಆಳವಾದದ್ದು ಎಂದು ಸುಮ್ಮನಾಗಬೇಕು.



ಪರಿಮಳ ಪಸರಿಸಿದೆ. ಕೇವಲ ಪಾಕಶಾಲೆಯ ಘಟಕವಾಗಿಯೇ ಇದರ ಬಳಕೆ ಸೀಮಿತವಾಗಿಲ್ಲ. ಸೌಂದರ್ಯ ಪ್ರಸಾಧನಗಳು, ಔಷಧಿಗಳ ತಯಾರಿಕೆಯಲ್ಲೂ ಕೇಸರಿಯನ್ನು ಹೇರಳವಾಗಿ ಬಳಸಲಾಗುತ್ತಿದೆ. ಬೃಹತ್ ಬಹುರಾಷ್ಟ್ರೀಯ ಉದ್ಯಮಗಳ ಕೈಯಲ್ಲಿ  ಸಿಲುಕಿರುವ ಕೇಸರಿ, ಇಂದು ನಮ್ಮ ಹಳ್ಳಿಯ ಭಾಗೀರಥಿ ಬಾಯಿ, ಸೀತಮ್ಮನಂತಹ ಸಾಮಾನ್ಯ ಮಹಿಳೆಯರ ಕೈಗೆಟಕುತ್ತಿಲ್ಲ!

ಕೇಸರಿ ಶ್ರೀಮಂತರ ಕೈಸೆರೆಯಾಗಿರುವ ಸಂಗತಿ ಹೊಸದೇನಲ್ಲ. ಈಜಿಪ್ಟಿನ ಸೌಂದರ್ಯಖನಿ ಕ್ಲಿಯೋಪಾತ್ರಾ ಇದನ್ನು ಸ್ನಾನದ ನೀರಿನಲ್ಲಿ ತುಂಬಿಸಿ ತನ್ನ ಸೌಂದರ್ಯವನ್ನು ನೂರ್ಮಡಿಗೊಳಿಸುತ್ತಿದ್ದಳು. ಅಲೆಗ್ಸಾಂಡರ್ ಚಕ್ರವರ್ತಿ, ಯುದ್ಧದಲ್ಲಾದ ಗಾಯಗಳ ಚಿಕಿತ್ಸೆಗೆ ಮತ್ತು ತನ್ನ ಚಹಾದಲ್ಲಿ ಬಳಸುತ್ತಿದ್ದನೆಂದು ದಾಖಲೆಯಿದೆಯಂತೆ! 14ನೆಯ ಶತಮಾನದ ಭಯಂಕರ ರೋಗ ಬ್ಯುಬೋನಿಕ್ ಪ್ಲೇಗನ್ನು ವಾಸಿ ಮಾಡಲು ಇದನ್ನು ಬಳಸುತ್ತಿದ್ದರಂತೆ. ಸ್ಪಾನಿಶ್ ಖಾದ್ಯ ಪಯೇಯ್ಯಾ, ಕಾಶ್ಮೀರಿನ ಕರ್ರಿ, ಪುಲಾವ್, ಪರ್ಷಿಯನ್ ಅಕ್ಕಿಯ ಖಾದ್ಯಗಳ ಪ್ರಮುಖ ಘಟಕಾಂಶವೆನಿಸಿದ ಕೇಸರಿಯನ್ನು, ಶಾಂಪೂ, ಚರ್ಮದ ಕ್ರೀಮ್ ಹೀಗೆ ಹಲವು ಹತ್ತು ಉತ್ಪಾದನೆಗಳಲ್ಲಿ ಬಳಸುತ್ತಿದ್ದಾರೆ. ಚೀನಾದ ಸಾಂಪ್ರದಾಯಿಕ ಔಷಧಗಳಲ್ಲಿ ಕೇಸರಿಯನ್ನು, ಋತುಕಾಲದ ಸಮಸ್ಯೆಗಳ ನಿವಾರಣೆಗೆ, ಅಸ್ತಮಾ, ಖಿನ್ನತೆ ಮತ್ತು ಲೈಂಗಿಕ ಸಮಸ್ಯೆಗಳ ನಿವಾರಣೆಗೆ ಬಳಸುತ್ತಾರೆ.